ಪ್ರಧಾನ ಸಿ.ಜೆ. ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮದ್ದೂರು

ದಿಃ 25-03-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿಎಸ್ ಎಸ್ ವಕೀಲರವರಿಂದಃ

ನನಗೆ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ್ ಬಂದಿರಲಿಲ್ಲ. ಸಾಕ್ಷಿ ನುಡಿಯಲು ವಾದಿಯ ಗಂಡ ನನ್ನನ್ನು ಕರೆದಿರುತ್ತಾರೆ. ವಾದಿಯು ಪ್ರತಿವಾದಿಯ ವಿರುದ್ಧ ದಾವೆ ಹೂಡಿರುತ್ತಾರೆ. ನಾನು 5 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೆನೆ. ದಾವಾ ಸ್ವತ್ತಿನ ಆಸ್ತಿ ನಂಬರ್, ವಿಸ್ತೀರ್ಣ, ಚಕ್ಕುಬಂಧಿ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿನ ಮಾಹಿತಿಯನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿಯವರು ಏನು ಪರಿಹಾರ ಕೋರಿ ದಾವೆ ಹೂಡಿದ್ದಾರೆಂದು ನನಗೆ ಗೊತ್ತಿಲ್ಲ. ಕೆಂಪಮ್ಮ ರವರು ಸಿಲವಾರ ಗ್ರಾಮದಿಂದ ಬಂದು ಸೇರಿಕೊಂಡಿದ್ದರು. ಸದರಿಯವರು ಮರಣ ಹೊಂದಿದ್ದು ಎಷ್ಟು ವರ್ಷವಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಕೆಂಪಮ್ಮ ರವರ ಹೆಸರಿನಲ್ಲಿದ್ದ ದಾವಾ ಸ್ವತ್ತಿನ ದಾಖಲೆ ನೋಡಿದ್ದೆನೆ. ಸದರಿಯವರಿಗೆ ಸರ್ಕಾರದವರು ಗರೀಬಿ ನಿವೇಶನ ನೀಡಿದ ದಾಖಲೆ ನಾನು ನೋಡಿದ್ದೆನೆ. ಆದರೆ ಯಾವಾಗ ನೀಡಿದ್ದರು ಎಂದು ನನಗೆ ಗೊತ್ತಿಲ್ಲ, ಸದರಿ ದಾಖಲೆಯನ್ನು ಸುಮಾರು 30 ವರ್ಷಗಳ ಹಿಂದೆ ನೋಡಿದ್ದೆನೆ. ಸದರಿ ದಾಖಲೆಯ ಹೆಸರು ನನಗೆ ಗೊತ್ತಿಲ್ಲ. ಸದರಿ ಕೆಂಪಮ್ಮ ರವರ ಹೆಸರಿಗೆ ದಾವಾ ಸ್ವತ್ತಿನ ಖಾತೆ ಯಾಗಿತ್ತೊ ಇಲ್ಲವೂ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೂಲ ಖಾತೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ನಾನು ವಿಚಾರಣೆ ನೀಡುವ ಪೂರ್ವದಲ್ಲಿ ದಾವಾ ಸ್ವತ್ತು ಮೂಲತಃ ಯಾರ ಹೆಸರಿನಲ್ಲಿತ್ತು ಮತ್ತು ಯಾರಿಗೆ ವರ್ಗಾವಣೆಯಾಗಿದೆ ಎಂದು ತಿಳಿದುಕೊಂಡಿಲ್ಲ. ದಿ 15-12-1992 ರಂದು ಪ್ರತಿವಾದಿಯು ನನ್ನ ಆಸ್ತಿ ಎಂದು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದರು. ಸದರಿ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯನ್ನು ನೋಡಿದ್ದೆನೆ. ಸದರಿ ದಿನಾಂಕ ನನಗೆ ನೆನಪಿಲ್ಲ, ನಾನು ಬರೆದು ಇಟ್ಟುಕೊಂಡಿರಲಿಲ್ಲ. ನನಗೆ ಹುಟ್ಟಿದ ದಿನಾಂಕ ನೆನಪಿಲ್ಲ. ಕೆಂಪಮ್ಮ ರವರಿಂದ ವಾದಿಯವರು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಕ್ರಯಪತ್ರದ ವ್ಯವಹಾರಕ್ಕೆ ನಾನು ಸೇರಿರಲಿಲ್ಲ. ಸದರಿ ಪತ್ರ ನೊಂದಣಿಯಾಗಿದೆಯೋ ಇಲ್ಲವೂ ನನಗೆ ಗೊತ್ತಿಲ್ಲ, ಆದರೆ ಪತ್ರ ನೋಡಿದ್ದೆನೆ. ಅದನ್ನು 3-4 ವರ್ಷಗಳ ಹಿಂದೆ ವಾದಿಯವರು ನೀಡಿದ್ದರು. ಸದರಿ ಪತ್ರದಲ್ಲಿ ಬರೆದಿರುವ ಯಾವುದೇ ವಿಚಾರ ನನಗೆ ಗೊತ್ತಿಲ್ಲ. ವಾದಿಯವರು ಕೆಂಪಮ್ಮ ರವರಿಂದ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾಗಿ ನಾನು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ವಾದಿಯವರು ಎಷ್ಟು ವರ್ಷದ ಹಿಂದೆ ಮದುವೆಯಾಗಿದ್ದಾರೆಂದು ಗೊತ್ತಿಲ್ಲ. ಸದರಿಯವರ ಗಂಡ ಕೆಇಬಿಯಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ವಾದಿಯವರು ಆಕೆಯ ಗಂಡನೊಂದಿಗೆ ಮಂಡ್ಯದಲ್ಲಿ ಸುಮಾರು 30-40 ವರ್ಷಗಳಿಂದ ವಾಸಿಸುತ್ತಿದ್ದಾರೆಂದರೆ ಸರಿ.

ದಾವಾ ಸ್ವತ್ತಿನಲ್ಲಿ ಎಂದೂ ಕೂಡ ವಾದಿಯವರು ಸ್ವಾಧೀನಾನುಭವ ಹೊಂದಿರಲಿಲ್ಲ ಎಂದರೆ ಸಾಕ್ಷಿ ಹಿಂದೆ ಇದ್ದರೂ ಆದರೆ ಈಗ ಇಲ್ಲ ಎನ್ನುತ್ತಾರೆ. ಹಿಂದೆ ಎಂದರೆ ಸುಮಾರು 20 ವರ್ಷಗಳ ಹಿಂದೆ ಇದ್ದರು. ಸದರಿ ಯಾವ ವರ್ಷ ಎಂದು ನನಗೆ ಗೊತ್ತಿಲ್ಲ. 20 ವರ್ಷದ ಹಿಂದೆ ವಾದಿಯವರು ಸ್ವಾಧೀನಾನುಭವ ಹೊಂದಿದ್ದರುೂ ಎಂದು ತೋರಿಸಲು ದಾಖಲಾತಿ ನೋಡಿಲ್ಲ. ದಾವಾ ಸ್ವತ್ತಿನ ಸ್ವಾಧೀನಾನುಭವನ್ನು ಕ್ರಯದ ದಿನದಂದೇ ಕೊಟ್ಟಿದ್ದು, ಅಂದಿನಿಂದ ಸ್ವಾಧೀನಾನುಭವ ಹೊಂದಿದ್ದರೂ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯವರು ನನಗೆ ಮಂಡ್ಯದಲ್ಲಿ ತೋರಿಸಿದ ದಾಖಲೆಗೆ ಸಂಬಂಧಿಸಿದಂತೆ ವಾದಿಗೆ ಹಕ್ಕು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆ ನೀಡಿಲ್ಲದಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎಂದೂ ಕೂಡ ವಾದಿಯವರು ದಾವಾ ಸ್ವತ್ತಿನ ಸ್ವಾಧೀನಾನುಭವ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ದಿ 24-06-2013 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನ್ನ ವೈಯಕ್ತಿಕ ದಾವೆ ಇದ್ದರಿಂದ ನಾನು ನ್ಯಾಯಾಲಯಕ್ಕೆ ಹೋಗಿದ್ದೆ ಎನ್ನುತ್ತಾರೆ. ದಾವಾ ಸ್ವತ್ತಿಗೆ ವಾದಿಯವರು ಕಂದಾಯ ಪಾವತಿಸಿರುವ ದಾಖಲೆಯನ್ನು ತೋರಿಸಿದ್ದರು. ಯಾವ ಯಾವ ದಿನಾಂಕದಂದು ಎಷ್ಟು ಎಷ್ಟು ಪಾವತಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಕಂದಾಯ ದಾಖಲಾತಿಗಳು ವಾದಿಯ ಹೆಸರಿಗೆ ವರ್ಗಾವಣೆಯಾಗಿರುವ ಯಾವುದೇ ದಾಖಲೆ ನಾನು ನೋಡಿಲ್ಲ. 2012 ನೇ ಇಸವಿಯಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ಕೆಂಪಮ್ಮ ಮತ್ತು ವಾದಿಯವರಿಗೆ ಯಾವುದೇ ಸಂಬಂಧವಿಲ್ಲ. ಪ್ರತಿವಾದಿಯವರು ಯಾವ ದಿನಾಂಕಂದು ದಾವಾ ಸ್ವತ್ತಿನಲ್ಲಿ ವಾಸಿಸಲು ಅನುಮತಿ ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ದಾವಾ ಸ್ವತ್ತಿನಲ್ಲಿ ವಾಸಿಸಲು ಅನುಮತಿ ಕೇಳಿದ್ದರು ಎಂಬ ವಿಚಾರವೂ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ದಾವಾ ಸ್ವತ್ತಿನಲ್ಲಿ ಮಾಲೀಕರಾಗಿ ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯವರು ದುರಾಲೋಚನೆಯಿಂದ ಖಾತೆ ಬದಲಾಯಿಸಿಕೊಳ್ಳಲು ಸುಳ್ಳು ಅರ್ಜಿ ನೀಡಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವ ದಿನಾಂಕದಂದು ಪಂಚಾಯಿತಿ ಸೇರಿದ್ದೇವು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರಲ್ಲಿ ವಾದಿಯವರು ಸ್ವಾಧೀನ ಹಿಂದಿರುಗಿಸಲು ಕೇಳಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ಮತ್ತು ನಾನು ಸ್ನೇಹಿತರು. ವಾದಿಯವರ ಗಂಡ ನನ್ನ ಸ್ನೇಹಿತರಾಗಿರುವುದರಿಂದ ಅವರಿಗೆ ಸಹಾಯ ಮಾಡಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ,

ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿಗೂ, ವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಆಜು ಬಾಜಿನಲ್ಲಿ ನನ್ನ ಯಾವುದೇ ಆಸ್ತಿ ಇಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು